


International Journal of Kannada Research
www.kannadajournal.com

**ISSN: 2454–5813**
IJKR 2023; 9(4): 90-93
© 2023 IJKR
www.kannadajournal.com
Received: 16-09-2023
Accepted: 20-10-2023

**ಡಾ.ವಿಜಯಕುಮಾರ್ ಎಚ್.ಜಿ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ಡಾ.ವಿಜಯಕುಮಾರ್ ಎಚ್.ಜಿ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಕರ್ನಾಟಕ, ಭಾರತ

# ಬೇಡ ಸಮುದಾಯ ಮತ್ತು ರಂಗನಾಥ ಸಂಪ್ರದಾಯ

**ಡಾ.ವಿಜಯಕುಮಾರ್ ಎಚ್.ಜಿ.**

**DOI:** https://doi.org/10.22271/24545813.2023.v9.i4b.902

**ಪೀಠಿಕೆ**

ನಮ್ಮ ಸಂಸ್ಕೃತಿಯನ್ನು ಕುರಿತು ಚರ್ಚಿಸುವಾಗ ಪರಸ್ಪರ ಸಂಬಂಧವಿಲ್ಲದ ವಿಭಿನ್ನ ರೀತಿಯ ಆಚರಣಾ ವಿಧಾನಗಳನ್ನು ನಾವು ಚಿತ್ರಿಸಿ ಕೊಂಡಿದ್ದೇವೆ. ನಮ್ಮ ದೈವ ಆರಾಧನೆಗೆ ಸಂಬಂಧಿಸಿದಂತೆ ವೇದ ಪುರಾಣಗಳ ಬೇರಿನಿಂದಲೇ ಅವುಗಳನ್ನು ಶೋಧಿಸುತ್ತಾ ಬರಲಾಗಿದೆ. ಜನಪದೀಯ ಆಚರಣೆಗಳ ಚಿತ್ರಣವನ್ನು ಮರೆಮಾಡಲಾಗುತ್ತಿದೆ. ನಮ್ಮ ಸಂಸ್ಕೃತಿಯ ಒಂದು ಬಹುಮುಖ್ಯ ಭಾಗವಾದ ದೈವಗಳ ಚರ್ಚೆಯನ್ನು ನಾವು ಜಾನಪದೀಯ ಮತ್ತು ಐತಿಹಾಸಿಕ ಆಧಾರಗಳ ಹಿನ್ನೆಲೆಯಲ್ಲಿ ಗ್ರಹಿಸುವುದು ಹೆಚ್ಚು ಸೂಕ್ತವೆನಿಸುತ್ತದೆ. ಅಂದರೆ ಆ ದೈವಗಳು ರೂಪುಗೊಂಡ ಬಗೆಯನ್ನು ಗ್ರಹಿಸಲು ವರ್ತಮಾನವನ್ನು ಗುರುತಿಸುವುದು ಬಹುಮುಖ್ಯವೆನಿಸುತ್ತದೆ. ಇಂದಿನ ಒಂದು ದೇವತೆಯನ್ನು ಅದರ ಪೂಜಾ ವಿಧಾನ, ಅದರ ಪಂಥ, ಆಚರಣೆಗಳು ಪುರಾಣಗಳನ್ನು ಗಮನಿಸಿದರೆ ಅವು ಪ್ರಾಚೀನಕ್ಕಿಂತಲೂ ಮಧ್ಯಕಾಲೀನ ಸಂದರ್ಭದಲ್ಲಿ ವಿವಿಧ ಧಾರ್ಮಿಕ ಪಂಥಗಳ ಪ್ರಭಾವಕ್ಕೆ ಒಳಗಾಗಿ ಸ್ಥಿತ್ಯಂತರಗೊಂಡಿರುವುದನ್ನು ಗಮನಿಸಬಹುದು.

ಮೇಲಿನ ಚರ್ಚೆಗೆ ಸಂಬಂಧಿಸಿದಂತೆ ಬೇಡ ಬುಡಕಟ್ಟಿನ ಮೂಲ ದೈವವಾದ 'ಬೇಟೆರಾಯ' ಇಂದು ರಂಗನಾಥನಾಗಿ ಆರಾಧನೆಗೊಳ್ಳುತ್ತಿರುವುದನ್ನು ಪರಿಶೀಲಿಸಬಹುದು. ಬೇಡ ಜನಾಂಗ ಮೂಲತಃ ಬೇಟೆ ಸಂಸ್ಕೃತಿಯನ್ನು ಪ್ರಧಾನವಾಗಿ ಅನುಸರಿಸುತ್ತಾ ಬಂದಿರುತ್ತದೆ. ಇವರು ದಟ್ಟವಾದ ಅರಣ್ಯಗಳಲ್ಲಿ, ಎತ್ತರದ ಬೆಟ್ಟ ಗುಡ್ಡಗಳಲ್ಲಿ, ತಮ್ಮ ನೆಲೆಯನ್ನು ಕಂಡುಕೊಂಡವರು. ಈ ಜನಾಂಗ ಸಾಂಸ್ಕೃತಿಕವಾಗಿಯೂ ಸಹ ತಮ್ಮದೇ ಆದ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿದೆ. ಅದರ ಚಹರೆಗಳನ್ನು ಆದಿಮಾನವನ ಕಾಲದಿಂದಲೂ ಗುರುತಿಸಬಹುದು. ಪ್ರತಿ ಬುಡಕಟ್ಟುಗಳು ವೃತ್ತಿಗೆ ಅನುಗುಣವಾಗಿ ತಮ್ಮದೇ ಆದ ಒಂದು ದೈವವನ್ನು ಹೊಂದಿರುತ್ತವೆ. ಬೇಡ ಜನಾಂಗವು ಸಹ ತಮ್ಮ ಮೂಲ ದೈವವಾಗಿ 'ಬೇಟೆರಾಯನನ್ನು' ಆರಾಧಿಸುತ್ತಿರುವುದು ಸ್ಪಷ್ಟ. ಬೇಡ ಸಮುದಾಯ–ಬೇಟೆ– ಬೇಟೆರಾಯ ಇವುಗಳ ನಡುವೆ ಅವಿನಾಭಾವ ಸಂಬಂಧವಿದೆ. ಬೇಡರ ಮೂಲ ಕಸುಬು ಬೇಟೆಯಾಗಿದ್ದರೂ ಸಹ ಕಾಲಕಾಲಕ್ಕೆ ಕೆಲವು ಗುಂಪುಗಳು ತಮ್ಮ ವೃತ್ತಿಗಳಲ್ಲಿ ಮಾರ್ಪಾಡು ಹೊಂದಿರುವುದನ್ನು ಗುರುತಿಸಬಹುದು. ಕೆಲವು ಗುಂಪುಗಳು ಸೈನ್ಯಾಡಳಿತದಲ್ಲಿ ಕೆಲವು ಹುದ್ದೆಗಳನ್ನು ಹೊಂದಿದರೆ ಮತ್ತೆ ಕೆಲವರು ಪಶುಪಾಲನೆ, ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ಅರಣ್ಯದ ಸಹವಾಸದಿಂದ ಗ್ರಾಮಜೀವನಕ್ಕೆ ಕಾಲಿಟ್ಟ ಸಮುದಾಯಗಳು ಗ್ರಾಮಸಂಸ್ಕೃತಿಯನ್ನು ಅನುಸರಿಸಿದರೂ ಸಹ ತಮ್ಮ ಮೂಲ ಬುಡಕಟ್ಟಿನ ಕೆಲವು ಆಚರಣೆಗಳನ್ನು ಕೈಬಿಡದೆ ಅನುಸರಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ಇಂದು ಬೇಟೆಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಗಿದೆ. ಆದರೂ ಸಹ ಈ ಬುಡಕಟ್ಟು ಸಮುದಾಯ ವಿಜಯದಶಮಿ, ಶಿವರಾತ್ರಿ, ಯುಗಾದಿ, ಮುಂತಾದ ಹಬ್ಬಗಳಲ್ಲಿ ಬೇಟೆ ಸಂಸ್ಕೃತಿಯನ್ನು ಸಾಂಕೇತಿಕವಾಗಿ ಆಚರಣೆ ಮಾಡುವುದು ಇದಕ್ಕೆ ಪುರಾವೆಗಳನ್ನು ಒದಗಿಸುತ್ತವೆ. ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ತುಮಕೂರು, ಭಾಗಗಳಲ್ಲಿನ ಬೇಡ ಸಮುದಾಯಗಳು ವಿಶೇಷ ಹಬ್ಬಗಳಂದು ಇಂದಿಗೂ ಈ ಆಚರಣೆಯನ್ನು ಅನುಸರಿಸಿಕೊಂಡು ಬಂದಿವೆ. ಹಲವು ಗ್ರಾಮಗಳಲ್ಲಿ ಶಿವರಾತ್ರಿ, ಯುಗಾದಿ ಹಬ್ಬಗಳಂದು ಬೇಟೆಗೆಂದು ಕಾಡಿಗೆ ಹೋಗುತ್ತಾರೆ. ಕಾಡಿನಲ್ಲಿ ಸಿಗುವ ಯಾವುದಾದರೊಂದು ಕಾಡು ಪ್ರಾಣಿಯನ್ನು ಹಿಡಿದು ಅದಕ್ಕೆ ಪೂಜೆ ಸಲ್ಲಿಸಿ, ಆ ಜೀವಂತ ಪ್ರಾಣಿಯನ್ನು ತಮ್ಮ ದೈವಕ್ಕೆ ಸಾಂಕೇತಿಕವಾಗಿ ಅರ್ಪಿಸಿ ಅದನ್ನು ಕೊಲ್ಲದೆ ಮತ್ತೆ ಕಾಡಿನಲ್ಲಿಯೇ ಬಿಟ್ಟು ಬರುತ್ತಾರೆ.

ಈ ಆಚರಣೆ ತಮ್ಮ ಮೂಲ ಸಂಸ್ಕೃತಿಯಾದ ಬೇಟೆ-ಬೇಟೆ ದೈವದ ಆಚರಣೆಯೇ ಆಗಿರುತ್ತದೆ. ಇನ್ನು ವಿಜಯದಶಮಿ ಹಬ್ಬದಂದು ಪ್ರತಿ ಗ್ರಾಮಗಳಲ್ಲಿಯೂ ತಮ್ಮ ಗ್ರಾಮ ದೇವತೆಗಳ ಹೆಸರಿನಲ್ಲಿ ಅಂಬು ಹೊಡೆಯುವ ಆಚರಣೆಯನ್ನು ಅನುಸರಿಸಿಕೊಂಡು ಬರಲಾಗಿದೆ ಇದು ಸಹ ಬೇಡ ಸಂಸ್ಕೃತಿಯ ಪ್ರತೀಕವೇ ಆಗಿದೆ. ವಿಜಯದಶಮಿ ಹಬ್ಬ ವಿಜಯನಗರ ಕಾಲಘಟ್ಟದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದಿದೆ. ವಿಜಯನಗರ ಕಾಲದ ಅರಸರು ಬೇಡ ಸಮುದಾಯಕ್ಕೆ ಸೇರಿದವರಾಗಿದ್ದು ಅವರ ಆಳ್ವಿಕೆಯಲ್ಲಿ ಕರ್ನಾಟಕದಲ್ಲಿ ಹೆಚ್ಚು ಪಾಳೇ ಪಟ್ಟುಗಳು ಉದಯವಾದವು. ಈ ಪಾಳೆಯಗಾರರಲ್ಲಿ ಹೆಚ್ಚಿನವರು ಬೇಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇದರಿಂದ ಇಂಥ ಆಚರಣೆಗಳು ಅವರ ಆಳ್ವಿಕೆಗೆ ಒಳಪಟ್ಟ ಹಲವು ಮುಖ್ಯ ಧಾರ್ಮಿಕ ಕ್ಷೇತ್ರಗಳಲ್ಲಿ ನೆಲೆಗೊಂಡಿರುವ ಸಾಧ್ಯತೆಗಳಿವೆ. ಕಾಲಾನಂತರದಲ್ಲಿ ಬೇಡ ಜನಾಂಗದ ಬುಡಕಟ್ಟು ಆಚರಣೆಗಳು ವೈದಿಕ ಸ್ಪರ್ಶ ಪಡೆದು ಅದೊಂದು ಶಿಷ್ಟ ಪರಂಪರೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳಾಗಿ ರೂಪುಗೊಂಡು ವರ್ತಮಾನದಲ್ಲಿ ಸಾರ್ವತ್ರಿಕ ಮುದ್ರೆಯನ್ನು ಪಡೆದಿರುವುದನ್ನು ಗಮನಿಸಬಹುದು.

ಬೇಡ ಸಮುದಾಯಗಳು ತಮ್ಮ ಹಾಡಿ, ಪೋಡು, ಹಟ್ಟಿ ಅಥವಾ ಗ್ರಾಮಗಳಲ್ಲಿ ತಮ್ಮ ಬೇಟೆ ದೈವವಾದ ಬೇಟರಾಯನನ್ನು ಸ್ಥಾಪಿಸಿಕೊಂಡಿರುತ್ತಾರೆ. ಈ ದೈವವನ್ನು ಯಾವುದಾದರೊಂದು ಮರದ ಕೆಳಗೆ ಅಥವಾ ತಮ್ಮ ಗ್ರಾಮಗಳ ಹೆಬ್ಬಾಗಿಲಿನಲ್ಲಿ ಪ್ರತಿಷ್ಠಾಪಿಸಿಕೊಂಡಿರುತ್ತಾರೆ. ಮೂಲತಃ ಪ್ರಕೃತಿ ಆರಾಧಕರಾದ ಇವರು ತಮ್ಮ ದೈವವನ್ನು ಯಾವ ಮೂರ್ತಿಯ ರೂಪದಲ್ಲಿ ಆರಾಧಿಸದೆ, ಸರಳವಾದ ೪-೫ಅಡಿ ಎತ್ತರದ ನಿಲುಸುಗಲ್ಲು, ಕಪ್ಪು ಶಿಲೆಯ ಗುಂಡುಗಳನ್ನು ತಮ್ಮ ದೈವದ ಮೂರ್ತಿಗಳೆಂದು ಆರಾಧಿಸುತ್ತಾರೆ. ಬೇಟೆಗೆ ಹೊರಡುವ ಮುನ್ನ ಈ ದೈವವನ್ನು ಪೂಜಿಸಿ ತಮಗೆ ಒಳ್ಳೆಯ ಬೇಟೆ ಸಿಕ್ಕಲಿ ಎಂದು ಪ್ರಾರ್ಥಿಸಿ ಬೇಟೆಗೆ ಹೊರಡುತ್ತಾರೆ. ಹೀಗೆ ಅವರ ಬೇಟೆ ದೈವವಾದ ಬೇಟೆರಾಯನ ಸರಳವಾದ ಆಚರಣೆಯನ್ನು ಈ ಸಮುದಾಯ ನಡೆಸಿಕೊಂಡುಬಂದಿರುತ್ತದೆ. ೧೨ನೇ ಶತಮಾನದ ನಂತರ ಅಥವಾ ಹೊಯ್ಸಳರ ಅವಧಿಯ ಉತ್ತರಾರ್ಧದಲ್ಲಿ ಕರ್ನಾಟಕದಲ್ಲಿ ವೈಷ್ಣವ ಮತ್ತು ಶೈವ ಧರ್ಮಗಳು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದವು. ಈ ವಿಸ್ತರಣಾ ಅವಧಿಯಲ್ಲಿ ಇವೆರಡೂ ಪಂಥಗಳು ಗ್ರಾಮ, ನಗರಗಳನ್ನು ಅಲ್ಲದೆ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಬುಡಕಟ್ಟು ಜನಾಂಗಗಳನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾದವು. ತುಂಗಭದ್ರ ನದಿಯ ಉತ್ತರಾರ್ಧದಲ್ಲಿ ಶೈವಧರ್ಮದ ಗಾಢವಾದ ಪ್ರಭಾವವನ್ನು, ದಕ್ಷಿಣದಲ್ಲಿ ವೈಷ್ಣವ ಧರ್ಮದ ಪ್ರಭಾವವನ್ನು ಗುರುತಿಸಬಹುದು. ಉತ್ತರ ಭಾರತದಲ್ಲಿ ನಿರ್ಮಿತವಾಗಿರುವ ಮಠಗಳು, ದೇವಾಲಯಗಳು ಶೈವ ಪಂಥಕ್ಕೆ ಸೇರಿದವುಗಳಾಗಿದ್ದರೆ, ದಕ್ಷಿಣದಲ್ಲಿನ ಮಠಗಳು, ದೇವಾಲಯಗಳು ವೈಷ್ಣವ ಪಂಥಗಳನ್ನು ಪ್ರತಿನಿಧಿಸುತ್ತಿರುವುದಕ್ಕೆ ಸ್ಪಷ್ಟ ಆಧಾರಗಳು ದೊರೆಯುತ್ತವೆ.

ಇಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಅಂಶವೆಂದರೆ ೧೨ನೇ ಶತಮಾನಕ್ಕೂ ಪೂರ್ವದಲ್ಲಿ ಈ ಬುಡಕಟ್ಟು ದೈವಗಳ ಬಗ್ಗೆ ಹೆಚ್ಚು ಮಾಹಿತಿಗಳು ಲಭ್ಯವಾಗುವುದಿಲ್ಲ. ಆದರೆ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಜನಾಂಗಗಳು ತಮ್ಮದೇ ಆದ ಜನಪದ ದೈವಗಳನ್ನು ಸೃಷ್ಟಿಸಿಕೊಂಡು ಬದುಕುತ್ತಿರುವುದು ಸ್ಪಷ್ಟ. ಬೇಡ ಬುಡಕಟ್ಟು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಮಧ್ಯ ಕರ್ನಾಟಕ ಪರಿಸರದಲ್ಲಿ ಈ ಸಮುದಾಯ ಮುಖ್ಯವಾಗಿ ರಂಗನಾಥನ ಸಂಪ್ರದಾಯದ ಆರಾಧಕರಾಗಿ ಗುರ್ತಿಸಿಕೊಂಡಿದ್ದಾರೆ. ಶ್ರೀರಂಗನಾಥನನ್ನು ಆರಾಧ್ಯದೈವವಾಗಿ ಹೊಂದಿರುವ ಕರ್ನಾಟಕದ ಬೇಡ ಸಮುದಾಯ ವೈಷ್ಣವ ಮೂಲ ಆರಾಧಕರು ಎಂಬುದನ್ನು ದೃಢಪಡಿಸುತ್ತದೆ.

"ರಂಗನಾಥನ ಮೂಲ ನೆಲೆ ತಮಿಳುನಾಡಿನ ಶ್ರೀರಂಗಂನಲ್ಲಿದೆ. ರಾಮಾನುಜಾಚಾರ್ಯರು ಹೊಯ್ಸಳರ ಕಾಲದಲ್ಲಿ ಕರ್ನಾಟಕಕ್ಕೆ ಬಂದು ಇಲ್ಲಿ ವೈಷ್ಣವ ಧರ್ಮ ನೆಲೆ ನಿಲ್ಲಲು ಕಾರಣರಾಗಿದ್ದಾರೆ. ೧೨ನೇ ಶತಮಾನದ ನಂತರದ ಕಾಲಘಟ್ಟದಲ್ಲಿ ಶ್ರೀವೈಷ್ಣವರ ಅಗ್ರಹಾರಗಳು, ಪೂಜಾಸ್ಥಾನಗಳು ಬೆಳೆದುಬಂದವು. ಇದಕ್ಕೂ ಪೂರ್ವದಲ್ಲಿ ರಂಗನಾಥ ಎಂಬ ದೇವತೆಯ ಉಲ್ಲೇಖ ಕರ್ನಾಟಕದಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಕರ್ನಾಟಕದಲ್ಲಿ ರಂಗನಾಥ ಎಂಬ ದೇವತೆಯ ಉಲ್ಲೇಖ ನಿಮಗೆ ಹೊಯ್ಸಳ ಕಾಲದ ಉತ್ತರಾರ್ಧದಲ್ಲಿ ಅಂದರೆ ೧೩ನೇ ಶತಮಾನದಿಂದ ಸಿಗುತ್ತವೆ. ಅದಕ್ಕಿಂತ ಪೂರ್ವದಲ್ಲಿ ಈ ದೇವತೆಯನ್ನು ಯಾವ ಹೆಸರಿನಿಂದ ಗುರುತಿಸುತ್ತಿದ್ದರು ಎಂಬುದಕ್ಕೆ ಯಾವ ಆಧಾರಗಳೂ ದಕ್ಕುವುದಿಲ್ಲ. ಮೂರ್ತಿಶಾಸ್ತ್ರ ಅಥವಾ ಪ್ರಕಾರಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ರಂಗನಾಥನ ಮೂರ್ತಿಗಳನ್ನು ಎರಡೂ ಪ್ರಕಾರಗಳಲ್ಲಿ ಗುರುತಿಸಬಹುದಾಗಿದೆ. ["ಲೌಕಿಕ ಅಲೌಕಿಕ. ಡಾ. ರಾಜಾರಾಮ ಹೆಗಡೆ ಪು.ಸಂ. ೧೮೨"] ಶ್ರೀರಂಗ ಎಂದರೆ ಕಾವೇರಿ ಕಣಿವೆ ಭಾಗದಲ್ಲಿ ಶೇಷಶಯನ ನಾರಾಯಣನ ಮೂರ್ತಿಗಳಾಗಿವೆ. ಈ ಮೂರ್ತಿಯನ್ನು ಜಲಶಯನ ಎಂದು ಮೂರ್ತಿ ಶಾಸ್ತ್ರಗಳು ಕರೆಯುತ್ತವೆ. ಶ್ರೀರಂಗಪಟ್ಟಣದ ರಂಗನಾಥನ ಶಿಲ್ಪವನ್ನು ನೋಡಬಹುದು. ಅದೇ ರೀತಿ ಬೆಳಗಾವಿಯಲ್ಲಿ ೮ನೇ ಶತಮಾನದಲ್ಲಿ ಒಂದು ಜಲಾಶಯನ ದೇವಾಲಯ ನಿರ್ಮಾಣವಾದ ಬಗ್ಗೆ ಶಾಸನೋಲ್ಲೇಖವಿದೆ. ಆದರೆ ಇಲ್ಲಿನ ದೇವತೆಯನ್ನು ರಂಗನಾಥ ಎಂಬ ಹೆಸರಿನಿಂದ ಕರೆಯುವುದಿಲ್ಲ. ಆದರೆ ಕಾವೇರಿ ಕಣಿವೆ ಭಾಗದಲ್ಲಿ ರಂಗನಾಥ ಎಂಬ ಪ್ರಾದೇಶಿಕ ಹೆಸರು ಗಟ್ಟಿಯಾಗಿರುವ ಸಾಧ್ಯತೆಗಳಿವೆ.

"ಕರ್ನಾಟಕದಲ್ಲಿ ರಂಗನಾಥ ಎಂದು ಗುರುತಿಸಲ್ಪಡುವ ದೇವತೆ ಕೂಡ ಒಂದು ಬೇಟೆಯಾಡುವ ದೇವತೆಯೇ ಆಗಿದೆ. ಹಾಗಾಗಿ ಆತನಿಗೆ ಬೇಟೆ ರಂಗನಾಥ, ಬೇಟರಾಯ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ರಂಗನಾಥನ ಕೆಲ ಮೂರ್ತಿಗಳಲ್ಲಿ ಆತನು ಬಿಲ್ಲು ಬಾಣಗಳನ್ನು ಹಿಡಿದಿರುತ್ತಾನೆ, ಸೊಂಟದ ಬಳಿ ಒಂದು ಕತ್ತಿ ತೂಗುತ್ತಿರುವಂತೆ ಈ ಮೂರ್ತಿಗಳು ಕೆತ್ತಲ್ಪಟ್ಟಿರುತ್ತವೆ. ನಿಂತಿರುವ ಭಂಗಿಯಲ್ಲಿ ಇರುತ್ತವೆ." ಕರ್ನಾಟಕದಲ್ಲಿ ಬೆಟ್ಟ-ಗುಡ್ಡಗಳಲ್ಲಿ ಕಂಡುಬರುವ ಈ ದೇವತೆ 'ಬೇಟೆಯ ದೇವತೆ' ಎಂಬ ಉಲ್ಲೇಖಗಳಿವೆ. ಬೇಟೆ ಮಾಡುವವರ ಗುಡ್ಡಗಾಡು ದೇವತೆಯ ಪೂಜೆ ಸಂಸ್ಕೃತಿಯನ್ನು ಇದಕ್ಕೆ ಆರೋಪಿಸಲಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಬಿಳಿಗಿರಿರಂಗನಾಥ ದೇವತೆಯನ್ನು ಗಮನಿಸಬಹುದು ಹಾಗೆ ಚನ್ನಗಿರಿಯ ಕೋಟೆಯ ಆವರಣದಲ್ಲಿ ರಂಗನಾಥ ದೇವಾಲಯದಲ್ಲಿನ ಮೂರ್ತಿ, ಹೊನ್ನಾಳಿ ತಾಲ್ಲೂಕಿನ ಕೋಣನತಲೆ ಎಂಬ ಗ್ರಾಮದಲ್ಲಿರುವ ರಂಗನಾಥನ ಮೂರ್ತಿಗಳು, ಮೇಲೆ ಚರ್ಚಿಸಲಾದ ಬೇಟೆದೇವತೆಯ ಮೂರ್ತಿ ಶಿಲ್ಪವನ್ನು ಹೊಂದಿವೆ. ಇದು ರಂಗನಾಥ ಮೂಲತಃ ಒಂದು ಬೇಟೆಯ ದೈವ ಎಂಬುದನ್ನು ದೃಢಪಡಿಸುತ್ತವೆ.

ಕರ್ನಾಟಕದಲ್ಲಿ ಈ ಬೇಟೆ ದೇವತೆಯೂ ಅಮೂರ್ತ ರೂಪಕ್ಕೆ ಬದಲಾಗಿರುವುದು ಹೊಯ್ಸಳೋತ್ತರ ಕಾಲದಲ್ಲಿ ಎಂಬುದುದು ಸ್ಪಷ್ಟ. ಅದಕ್ಕೂ ಪೂರ್ವದಲ್ಲಿ ಇಂದಿನ ರಂಗನಾಥ ರೂಪದಲ್ಲಿರುವ ಬೇಟೆ ದೈವವನ್ನು ಯಾವ ಹೆಸರುಗಳಿಂದ ಗುರುತಿಸುತ್ತಿದ್ದರು ಎಂಬುದಕ್ಕೆ ನಿಖರವಾದ ಪುರಾವೆಗಳು ದೊರೆಯುವುದಿಲ್ಲ. ಡಾ. ರಾಜಾರಾಮ ಹೆಗಡೆಯವರು ಗುರುತಿಸಿರುವಂತೆ "ಈ ದೇವತೆ ಒಂದು ಕಲ್ಲು, ಬಂಡೆಯ ರೂಪದಲ್ಲಿ ಪೂಜೆಗೊಳ್ಳುತ್ತಿತ್ತು ಎಂಬುದಂತೂ ಸ್ಪಷ್ಟ. ಇಂದೂ ಕೂಡ ಹಲವು ರಂಗನಾಥನ ಮೂರ್ತಿಯ ಎದುರುಗಡೆ ನೈಸರ್ಗಿಕ ಲಿಂಗಕ್ಕೂ ಬಂಡೆಗೂ ಪೂಜೆ ಸಲ್ಲಿಸುತ್ತಾರೆ. ಕೆಲವು ದೇವಾಲಯಗಳಲ್ಲಿ ಮೂರ್ತಿಯೇ ಇರುವುದಿಲ್ಲ. ಅರೆಮಲೆನಾಡಿನ

ಕೆಲವು ಭಾಗಗಳಲ್ಲಿ ಬೇಟೆಯನ್ನು ಆಡುವ ಮೊದಲು ಹಾಗೂ ನಂತರ ಇಂತಹದ್ದೇ ಬಂಡೆಯನ್ನು ಪೂಜಿಸಿ ಅದನ್ನು ಬೇಟೆರಾಯ ಎಂದು ಕರೆಯುತ್ತಾರೆ. ಈ ಹೇಳಿಕೆ ಬೇಟೆ ದೈವವಾದ ಬೇಟೆರಾಯನ ವಿಸ್ತೃತ ಚರ್ಚೆಗೆ ಅವಕಾಶ ಕಲ್ಪಿಸುತ್ತದೆ. ಇಂದಿಗೂ ಸಹ ಕರ್ನಾಟಕದ ಬಹುಸಂಖ್ಯೆಯ ರಂಗನಾಥನ ದೇವಾಲಯಗಳಲ್ಲಿ ರಂಗನಾಥನ ಮೂರ್ತಿಗಿಂತಲೂ ಸಹ ಉದ್ಭವ ಶಿಲೆಗಳನ್ನು ಅಥವಾ ಬಂಡೆಕಲ್ಲುಗಳನ್ನು ರಂಗನಾಥನೆಂದು ಆರಾಧಿಸುವ ಸಂಪ್ರದಾಯವಿದೆ. ಇದಕ್ಕೆ ಬಹಳಷ್ಟು ಉದಾಹರಣೆಗಳು ದೊರೆಯುತ್ತವೆ. ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಭಾಗದಲ್ಲಿ ಈ ರೀತಿಯ ಆರಾಧನೆಯೇ ಹೆಚ್ಚು. ಹೊಳಲ್ಕೆರೆಯ ಲೋಕದೊಳಲಿನ ದೊಡ್ಡಹೊಟ್ಟೆ ರಂಗನಾಥ ದೇವಾಲಯ ಗ್ರಾಮದ ಹೊರವಲಯದ ಬೆಟ್ಟದ ಮೇಲಿದೆ, ಉದ್ಭವ ಶಿಲೆಯನ್ನು ರಂಗನಾಥನೆಂದು ಆರಾಧಿಸಲಾಗುತ್ತಿದೆ. ಚನ್ನಗಿರಿಯ ಸಮೀಪದ ದೇವರಹಳ್ಳಿಯಲ್ಲಿಯೂ ಸಹ ಬೆಟ್ಟದ ಮೇಲೆ ಉದ್ಭವ ಲಿಂಗವನ್ನು, ಕೋಪೇನಹಳ್ಳಿಯಲ್ಲಿ ೩ಅಡಿ ಎತ್ತರದ ಕಪ್ಪು ಶಿಲೆಯನ್ನು, ದಾಗಿನಕಟ್ಟೆಯಲ್ಲಿ ೫ಅಡಿ ಎತ್ತರದ ಕಪ್ಪು ಶಿಲೆಯ ನಿಲುಸುಗಲ್ಲು, ಹೊನ್ನಾಳಿ ಸಮೀಪದ ದೇವರ ಹೊನ್ನಾಳಿಯಲ್ಲಿ ೨ ಕಪ್ಪು ಶಿಲೆಯ ಕಲ್ಲುಗುಂಡುಗಳನ್ನು, ಕೊಮಾರನಹಳ್ಳಿಯಲ್ಲಿ ಕಪ್ಪುಶಿಲೆಯ ಉದ್ಭವ ಲಿಂಗವನ್ನು, ಜಗಳೂರಿನ ಕೊಣಚಗಲ್ಲು ಗ್ರಾಮದಲ್ಲಿ ಕಪ್ಪುಶಿಲೆಯ ಉದ್ಭವ ಲಿಂಗ ವನ್ನು ರಂಗನಾಥನೆಂದು ಆರಾಧಿಸಲಾಗುತ್ತದೆ ಇಲ್ಲಿ ರಂಗನಾಥ ಮೂರ್ತಿ ರೂಪಕ್ಕಿಂತಲೂ ನೈಸರ್ಗಿಕ ಕಲ್ಲು ಬಂಡೆಗಳ ರೂಪದಲ್ಲಿ ಆರಾಧನೆಗೊಳ್ಳುತ್ತಿರುವುದು ಹೆಚ್ಚು. ಇದರಿಂದ ರಂಗನಾಥ ಎಂಬುದು ಬೇಡ ಬುಡಕಟ್ಟಿನ ಬೇಟೆ ದೈವ ಎಂಬುದು ಸ್ಪಷ್ಟವಾಗುತ್ತದೆ. ಆರಂಭದಲ್ಲಿ ಬೇಟೆ ದೈವವಾದ ಇದು ಕಾಲಾನಂತರದಲ್ಲಿ ಶಿಷ್ಟ ದೈವವಾಗಿ ರೂಪುಗೊಂಡಿರುವುದನ್ನು ಗುರುತಿಸಬಹುದು.

ಈ ಮೇಲಿನ ಚರ್ಚೆಯ ಮೂಲದಲ್ಲಿ ಬೇಟೆರಾಯ ಎಂಬ ದೈವವು ಬೇಡ ಸಮುದಾಯದ ಬೇಟೆ ದೈವವಾಗಿದ್ದು, ಮಧ್ಯಕಾಲೀನ ಸಂದರ್ಭದಲ್ಲಿ ರಂಗನಾಥ ಎಂಬ ಹೆಸರಿನಿಂದ ಆರಾಧನೆಗೊಳ್ಳುತ್ತಾ ಕರ್ನಾಟಕದಲ್ಲಿ ವೈಷ್ಣವ ಪರಂಪರೆಯ ರಂಗನಾಥನ ಸಂಪ್ರದಾಯವಾಗಿ ರೂಪಾಂತರಗೊಂಡಿರುವುದನ್ನು ಸ್ಪಷ್ಟಪಡಿಸುತ್ತದೆ. 'ಬೇಟೆರಾಯ' ರಂಗನಾಥನಾಗಿ ಬದಲಾವಣೆ ಹೊಂದಿರುವುದು ಹೊಯ್ಸಳರ ಕಾಲದಲ್ಲಿ. ಹೊಯ್ಸಳ ಅರಸರು ವೈಷ್ಣವ ಮತಾವಲಂಬಿಗಳಾಗಿದ್ದು. ಆ ಧರ್ಮಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ತಮಿಳುನಾಡಿನ ಶ್ರೀರಂಗಂನಿಂದ ಕರ್ನಾಟಕಕ್ಕೆ ಮತಪ್ರಚಾರಕ್ಕಾಗಿ ಬಂದ ಶ್ರೀ ರಾಮಾನುಜಾಚಾರ್ಯರ ಪ್ರಭಾವದ ಕಾವೇರಿ ಕಣಿವೆ ಭಾಗಗಳಲ್ಲಿ ಹೊಯ್ಸಳರ ಕಾಲದಲ್ಲಿ ಈ ಧರ್ಮವು ರಾಜಾಶ್ರಯವನ್ನು ಪಡೆದಿದ್ದರಿಂದ, ಅದರ ಆಡಳಿತ ವ್ಯಾಪ್ತಿಗೆ ಒಳಪಟ್ಟ ಎಲ್ಲ ಪ್ರಾಂತಗಳಲ್ಲಿಯೂ ವೈಷ್ಣವ ಸಂಪ್ರದಾಯದ ದೇವಾಲಯಗಳು ನಿರ್ಮಾಣವಾದವು. ಹಲವು ಬುಡಕಟ್ಟು ದೈವಗಳು ವಿಷ್ಣುವಿನ ಅವತಾರಗಳಿಗೆ ಆರೋಪಿಸಲ್ಪಟ್ಟವು. ಹೊಯ್ಸಳೋತ್ತರ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯ ವೈಷ್ಣವ ಸಂಪ್ರದಾಯವನ್ನು ಪೋಷಿಸಿತು.

ಈ ಹಿಂದೆ ಚರ್ಚಿಸಿದಂತೆ ವಿಜಯನಗರದ ಅರಸರೂ ಸಹ ಬೇಡ ಬುಡಕಟ್ಟಿನ ಮೂಲದವರಾಗಿದ್ದು. ಹಾಗೂ ಇವರ ಆಡಳಿತಾವಧಿಯಲ್ಲಿ ಹಲವು ಪಾಳೇ ಪಟ್ಟುಗಳು ಆಡಳಿತ ಕೇಂದ್ರಗಳಾಗಿ ತಲೆಯತ್ತಲ್ಪಟ್ಟವು. ಇವರೆಲ್ಲ ಬಹುತೇಕ ಬೇಡ ಸಮುದಾಯದವರೇ ಆಗಿದ್ದರಿಂದ, ಇವರು ತಮ್ಮ ಮೂಲ ಸಂಸ್ಕೃತಿಯ ಆಚರಣೆಯಾದ ಬೇಟೆರಾಯ ಸಂಪ್ರದಾಯವನ್ನು 'ರಂಗನಾಥ' ಎಂಬ ಹೆಸರಿನಿಂದ ಆಚರಿಸುತ್ತ ಬಂದಿರುವ ಸಾಧ್ಯತೆಗಳಿವೆ. "ವಿಜಯನಗರ ಕಾಲದಲ್ಲಿ ಅಮರ ನಾಯಕರಾದ ಪ್ರಾದೇಶಿಕ ಗುಡ್ಡಗಾಡು ಮೂಲದ ಅರಸರು ವಿಜಯನಗರ 'ನಾಯಕ ವ್ಯವಸ್ಥೆ' ಈ ವರೆಗೂ ರಾಜ್ಯ ವ್ಯವಸ್ಥೆಯಾಗಿ ಪ್ರವೇಶಿಸದಿದ್ದ ಗುಡ್ಡಗಾಡು ಪ್ರದೇಶಗಳನ್ನು ಆಡಳಿತ ಕೇಂದ್ರಗಳನ್ನಾಗಿ ಮಾಡಿತು. ಈ ಬದಲಾವಣೆಯಲ್ಲಿ ಗುಡ್ಡಗಾಡಿನ ದೇವತೆಗಳು ಪ್ರಾಧಾನ್ಯತೆ ಪಡೆದವು. ಈ ನಾಯಕರಲ್ಲಿ ಬಹುಮಂದಿ ಗುಡ್ಡಗಾಡಿನ ಬೇಟೆಯಾಡುವ, ಪಶುಸಂಗೋಪನೆ ಮಾಡುವ ಸಮಾಜದವರಾಗಿದ್ದರು. ಹೀಗೆ ೧೬-೧೭ನೇ ಶತಮಾನದಲ್ಲಿ ದಕ್ಷಿಣ ಕರ್ನಾಟಕದಲ್ಲಿ ರಂಗನಾಥನ ಸಂಪ್ರದಾಯ ವ್ಯಾಪಕವಾಗಿ ಹರಡಿಕೊಂಡಿದೆ. ಈ ದೇವಾಲಯಗಳ ನಿರ್ಮಾಣಗಳ ಕಾಲಘಟ್ಟವನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಇನ್ನೂ ಅನೇಕ ದೇವಾಲಯಗಳಲ್ಲಿ ಇಂದು ಮೂರ್ತಿ ಶಿಲ್ಪಗಳಲ್ಲಿ ಹಲವು ಬದಲಾವಣೆಗಳು ಆಗಿವೆ. ಜೀರ್ಣೋದ್ಧಾರದ ನೆಪದಲ್ಲಿ ಆಧುನಿಕ ಸ್ಪರ್ಶಕ್ಕೆ ಒಳಗಾಗಿ ತಮ್ಮ ಮೂಲ ಸ್ವರೂಪವನ್ನೇ ಕಳೆದುಕೊಂಡಿವೆ.

ಕರ್ನಾಟಕದಲ್ಲಿ ರಂಗನಾಥನ ಸಂಪ್ರದಾಯ ಬೇಡ ನಾಯಕರಿಂದಲೇ ಹೆಚ್ಚು ಮಹತ್ವವನ್ನೂ, ವಿಸ್ತಾರವನ್ನೂ ಪಡೆಯಿತು. ಕರ್ನಾಟಕ ದೇವಾಲಯಗಳ ಕೋಶ ದಾವಣಗೆರೆ ಜಿಲ್ಲೆ ಕೃತಿಯಲ್ಲಿ ಈ ಬಗ್ಗೆ ವಿಸ್ತೃತವಾದ ಚರ್ಚೆ ನಡೆಸಲಾಗಿದೆ. ಹೊಯ್ಸಳರಿಂದಾಗಿ ಮತ್ತು ಅವರ ಕಾಲದಲ್ಲಿ ಆಳ್ವಿಕೆ ಮಾಡಿದ ಮಲೆನಾಡು ಹಾಗೂ ಆ ಪರಿಸರದ ಸೆರಗಿನಲ್ಲಿ ಆಳ್ವಿಕೆ ಮಾಡಿದ ಬೇಡ ಕುಲದ ಆಡಳಿತಗಾರರಿಂದ ಇಂಥ ದೇವತೆಯು ಹೆಚ್ಚಿನ ಮಹತ್ವ ಹಾಗೂ ವಿಶೇಷ ವಿಸ್ತಾರ ಪಡೆಯಿತೆಂದು ಅಭಿಪ್ರಾಯಿಸಬಹುದು. ಅಲ್ಲದೆ ವಿಜಯನಗರ ಆಡಳಿತಾವಧಿಯಲ್ಲಿಯೂ ಇಂಥ ದೇವತೆಗಳಿಗೆ ಸಂಬಂಧಿಸಿದ ಪೂಜಾವಿಧಾನಗಳನ್ನು ಮತ್ತಷ್ಟು ಪ್ರಚಾರ ಪಡೆದವು. ["ಕರ್ನಾಟಕ ದೇವಾಲಯಗಳ ಕೋಶ ದಾವಣಗೆರೆ ಜಿಲ್ಲೆ ಪ್ರಸಾರಾಂಗ ಹಂಪಿ ವಿ.ವಿ. ಪು.ಸಂ. ೪೨"] ಇಲ್ಲಿ ಐತಿಹಾಸಿಕ ಆಧಾರಗಳಿಂದ ವಿವೇಚಿಸಲಾಗಿದೆ. ಈ ಮೇಲಿನ ಆಧಾರವು ರಂಗನಾಥನ ಸಂಪ್ರದಾಯ ಬೇಡ ಜನಾಂಗದಿಂದ ಹೆಚ್ಚು ಪ್ರಚಲಿತದಲ್ಲಿದೆ ಎಂಬುದನ್ನು ದೃಢಪಡಿಸುತ್ತದೆ.

ಇನ್ನು 'ರಂಗನಾಥ' ದೈವವು ವೈಷ್ಣವ ಸಂಪ್ರದಾಯದ ಆಚರಣೆಗೆ ಒಳಗಾಗಿದ್ದರೂ ಸಹ ಕೆಲವು ಬುಡಕಟ್ಟಿನ ಆಚರಣೆಗಳನ್ನು ಕೈಬಿಡಲು ಸಾಧ್ಯವಾಗಿಲ್ಲ. ಬೇಡ ಜನಾಂಗ ತಮ್ಮ ಆಹಾರ ಸಂಸ್ಕೃತಿಯನ್ನು ತಮ್ಮೊಡನೆ ಸದಾ ಜೀವಂತವಾಗಿರಿಸಿಕೊಂಡಿದ್ದಾರೆ. ಬಹುತೇಕ ವೈಷ್ಣವ ದೈವಗಳು ಶುದ್ಧ ಸಸ್ಯಾಹಾರಿ ಸಂಪ್ರದಾಯದವು. ಆದರೆ ರಂಗನಾಥ ಮಾಂಸಾಹಾರಿಯಾಗಿಯೂ ಗುರುತಿಸಿಕೊಂಡಿದೆ. ಇದಕ್ಕೆ ಕಾರಣ ಬೇಡ ಸಮುದಾಯದ ಮಾಂಸಾಹಾರ ಪದ್ಧತಿಯಾಗಿದೆ. ಇವರು ಬೇಟೆ ರಾಯನಿಗೆ ಮಾಂಸವನ್ನು ನೈವೇದ್ಯವಾಗಿ ಅರ್ಪಿಸುತ್ತಾರೆ. ಬೇಟೆರಾಯ ರಂಗನಾಥನಾಗಿ ಬದಲಾದರೂ ಆಹಾರ ಸಂಸ್ಕೃತಿಯಲ್ಲಿ ತಮ್ಮ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿವೆ. ಚನ್ನಗಿರಿ ಸಮೀಪದ ದೇವರಹಳ್ಳಿ, ಕೋಪೇನಹಳ್ಳಿ, ಕೊಡಚಗಲ್ಲು ಗ್ರಾಮಗಳಲ್ಲಿನ ರಂಗನಾಥನಿಗೆ ಕೋಳಿ, ಕುರಿ, ಬಲಿ ನೀಡಿ ಮಾಂಸಾಹಾರವನ್ನು ಅರ್ಪಿಸುತ್ತಾರೆ. ಕೆಲವು ಪ್ರದೇಶಗಳಲ್ಲಿ ರಂಗನಾಥನ ದೇವಾಲಯದ ಮುಂದೆ ಚಿಕ್ಕದಾದ ಭೂತಪ್ಪನ ಗುಡಿಯನ್ನು ನಿರ್ಮಿಸಿರುತ್ತಾರೆ. ಭೂತರಾಯ ರಂಗನಾಥನಿಗೆ ಕಂಟೆಂಟ್ ಕ್ಷೇತ್ರಪಾಲಕ ದೇವತೆಯಾಗಿ ಪರಿಗಣಿಸಲ್ಪಟ್ಟಿದೆ. ಇದರಿಂದ ಕೆಲವು ಪ್ರದೇಶಗಳಲ್ಲಿ ರಂಗನಾಥನಿಗೆ ಶುದ್ಧ ಸಸ್ಯಾಹಾರವನ್ನು ಅರ್ಪಿಸಿ, ಭೂತರಾಯನಿಗೆ ಮಾಂಸಾಹಾರವನ್ನು ಅರ್ಪಿಸಲಾಗುತ್ತದೆ. ಇದು ರಂಗನಾಥ ನರಪೂರ್ಣ ವೈದಿಕಕರಣಗೊಳಿಸಿ, ಆ ಸಂಪ್ರದಾಯದ ಆಚರಣೆಗಳನ್ನು ರಂಗನಾಥನಿಗೆ ಗಟ್ಟಿ ಮಾಡಿರುವುದರಿಂದ ಈ ಬದಲಾವಣೆಗಳು ಉಂಟಾಗಿವೆ. ಈ ಆಹಾರ ಸಂಸ್ಕೃತಿಯೂ ಸಹ ಬೇಡ ಜನಾಂಗದ ಮೂಲ ದೈವವಾದ 'ಬೇಟೆರಾಯ' ಶಿಷ್ಟ

ದೇವತೆಯಾಗಿ ಪರಿವರ್ತನೆಗೊಂಡಿರುವುದನ್ನು ರೂಪಾಂತರಗೊಂಡಿರುವುದನ್ನು ದೃಢಪಡಿಸುತ್ತಾರೆ.

ಇನ್ನು ಇದರ ಪೂಜಾ ವಿಧಿವಿಧಾನಗಳನ್ನು ಅವಲೋಕಿಸಿದರೆ, ಮೂಲದಲ್ಲಿ ಈ ದೈವವನ್ನು ಪೂಜಿಸುವ ಹಕ್ಕು ಬೇಡಜನಾಂಗಕ್ಕೆ ಇದ್ದು, ಇದು ವೈಷ್ಣವೀಕರಣಗೊಂಡಾಗ ಈ ಸಂಪ್ರದಾಯ ತಮ್ಮ ಅರ್ಚಕ ವೃತ್ತಿಯ ಹಕ್ಕನ್ನು ಉನ್ನತ ವರ್ಗಗಳಿಗೆ ಬಿಟ್ಟುಕೊಟ್ಟಿದೆ, 'ಬೇಟೆರಾಯ' ರಂಗನಾಥನಿಗೆ ರೂಪಾಂತರಗೊಂಡಿರುವುದರಿಂದ ಮೂಲ ಆರಾಧನಾ ಸಂಸ್ಕೃತಿಯಲ್ಲಿಯೂ ಬದಲಾವಣೆಗಳು ಉಂಟಾಗಿವೆ. ಇದರಿಂದ ರಂಗನಾಥನನ್ನು ಸಂಪ್ರದಾಯ ವಿಶೇಷವಾಗಿ ಬೇಡ ಸಮುದಾಯಕ್ಕೆ ಸೇರಿದ್ದಾಗಿದೆ. ಈ ಸಮುದಾಯದ ಆರಾಧ್ಯ ದೈವವಾಗಿ ಹೆಚ್ಚಿನ ಮಾನ್ಯತೆಯನ್ನು ಪಡೆದುಕೊಂಡಿದೆ. ಬೇಡಸಮುದಾಯದಲ್ಲಿ 'ರಂಗನಾಥ' ಎಂಬ ಹೆಸರು ಹೆಚ್ಚು ಪ್ರಚಲಿತದಲ್ಲಿದೆ. ಬೇಡ ಕುಟುಂಬದಲ್ಲಿ ಒಬ್ಬರಿಗಾದರೂ ರಂಗನಾಥ, ರಂಗಸ್ವಾಮಿ, ರಂಗಪ್ಪ ಎಂಬ ಹೆಸರುಗಳನ್ನು ಇಟ್ಟಿರುತ್ತಾರೆ. ರಂಗನಾಥನಿಗೆ ಸಂಬಂಧಿಸಿದಂತೆ ಪ್ರತಿ ವರ್ಷ ಕೂಡ ಜಾತ್ರೆಗಳು ನಡೆಯುತ್ತವೆ. ಈ ಜಾತ್ರೆಯಲ್ಲಿ ಎಲ್ಲ ಸಮುದಾಯಗಳ ಭಾಗವಹಿಸಿದರೂ ಬೇಡ ಜನಾಂಗಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

ಈ ಮೇಲಿನ ಚರ್ಚೆಯು ಬೇಡ ಸಮುದಾಯದ ಮೂಲ ದೈವವಾದ ಬೇಟೆರಾಯ ಇಂದು ಸ್ಥಿತ್ಯಂತರಕ್ಕೆ ಒಳಗಾಗಿ, ಕರ್ನಾಟಕದಲ್ಲಿ ರಂಗನಾಥ ಎಂಬ ಸಂಪ್ರದಾಯವಾಗಿ ಆಚರಣೆಯಲ್ಲಿದೆ. ಬೇಡ ಜನಾಂಗದ ಮುಖ್ಯ ವೃತ್ತಿಯಾದ 'ಬೇಟೆ'ಯ ಹಿನ್ನೆಲೆಯಿಂದ ರೂಪುಗೊಂಡ ಈ ಬೇಟೆದೈವ ಬೇಡ ಜನಾಂಗದ ಸಾಂಸ್ಕೃತಿಕ, ಅನನ್ಯತೆಯಾಗಿ ಗುರುತಿಸಬೇಕಾದ ಜರೂರುಗಳಿವೆ. ಏಕೆಂದರೆ ಪ್ರತಿ ಸಂಪ್ರದಾಯವು ತನ್ನ ಅಸ್ಮಿತೆಯನ್ನು ಜನಪದ, ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳಿಂದ ಗುರುತಿಸಿಕೊಳ್ಳುತ್ತವೆ. ಇಲ್ಲಿ ಒಂದು ಸಮುದಾಯ ದೈವವು ವೈಷ್ಣವೀಕರಣಗೊಂಡು ತನ್ನ ಮೂಲ ಆಚರಣೆ, ವಿಧಿವಿಧಾನಗಳಲ್ಲಿ ರೂಪಾಂತರಗೊಂಡಿದೆ. ಬದಲಾವಣೆ ಕಂಡಿದೆ. ಪ್ರಧಾನ ಧಾರೆಯ ದೈವಗಳು, ಪುರಾಣಗಳು, ಬುಡಕಟ್ಟು ದೈವಗಳನ್ನು ಎಷ್ಟು ತೆಕ್ಕೆಗೆ ತೆಗೆದುಕೊಳ್ಳುವುದರ ಮೂಲಕ ಆ ಸಮುದಾಯದ ಮೂಲ ನಂಬಿಕೆಗಳನ್ನೇ ನಾಶಪಡಿಸಿವೆ. ಇಂಥ ಚರ್ಚೆಗಳಿಂದ ಬುಡಕಟ್ಟು ಸಮುದಾಯಗಳು, ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಿ ಆ ಸಮುದಾಯಗಳಿಗೆ ಸಾಂಸ್ಕೃತಿಕ ಗೌರವವನ್ನು ತಂದುಕೊಡಬಲ್ಲವು. ಇದರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆದು, ಬೇಡ ಸಮುದಾಯದ ಸಾಂಸ್ಕೃತಿಕ ಮಹತ್ವ ನೆಲೆಗೊಳ್ಳಬೇಕಿದೆ.

## ಪರಾಮರ್ಶನ ಗ್ರಂಥಗಳು


1. ಲೌಕಿಕ–ಅಲೌಕಿಕ – ಡಾ. ರಾಜಾರಾಮ ಹೆಗಡೆ.
2. ಕರ್ನಾಟಕ ದೇವಾಲಯಗಳ ಕೋಶ, [ದಾವಣಗೆರೆ ಜಿಲ್ಲೆ] – ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
3. ದಾಗಿನಕಟ್ಟೆ ದಾತಾರ – ಸಾ.ಜಿ. ನಾಗಪ್ಪ. ಎಚ್.ರಾಮಚಂದ್ರ ಮೂರ್ತಿ.
4. ವಾಲ್ಮೀಕಿ ಸಮುದಾಯ – ಡಾ. ಮಂಜುನಾಥ ಬೇವಿನಕಟ್ಟೆ (ಸಂ)
5. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು – ಡಾ. ವಿರೂಪಾಕ್ಷಿ ಪೂಜಾರಹಳ್ಳಿ.